## ಮುಜುಗರಕ್ಕಿನ್ನೂ ಮುಕ್ತಿ ಸಿಕ್ಕಿಲ್ಲ

ಈಗ ಕೆಲವು ಸಮಸ್ಯೆಗಳು ಬಗೆಹರಿದಿವೆ. ನ್ಯಾಪ್ಕಿನ್ ಬಂದ ಮೇಲೆ ಮುಟ್ಟು ಸುವಿಧಗೊಂಡಿದೆ. ಪಾರಂಪರಿಕ ಪಾತ್ರಗಳಾಚೆಗೂ ಹೆಣ್ಣುಮಕ್ಕಳು ತೊಡಗಿಸಿಕೊಳ್ಳುತ್ತಿದ್ದಾರೆ. ಹಾಗಾಗಿ ಮುಟ್ಟಿನ ಕುರಿತ ಅಸಡ್ಡೆ, ಕೀಳರಿಮೆ, ಮೌಢ್ಯದಿಂದ ಹೆಣ್ಣುಮಕ್ಕಳು ಹೊರಬಂದಿರಬಹುದು ಎಂದು ಊಹಿಸಬಹುದು. ಆದರೆ ಇಲ್ಲ. ಈಗ ಹೆಣ್ಣುಮಕ್ಕಳ ಆದ್ಯತೆಗಳು ಬದಲಾಗಿವೆ, ವಿರಾಮದ ಕಲ್ಪನೆ ಬದಲಾಗಿದೆ. ಹಿನ್ನೆಲೆ ಬದಲಾಗಿದೆ. ಪರಿಸ್ಥಿತಿ ಕೊಂಚ ಸುಧಾರಿಸಿದೆ. ಆದರೂ ಮುಟ್ಟಿನ ದಿನಗಳನ್ನು ಮಾತ್ರ ಭಯ, ಮುಜುಗರದಿಂದಲೇ ನೋಡುತ್ತಿದ್ದಾರೆ.

ಅದಕ್ಕೆ ಕಾರಣ ಋತುಸ್ರಾವ ಕುರಿತು ಇಡಿಯ ಸಮಾಜಕ್ಕಿರುವ ಅಸಡ್ಡೆ. ಮುಟ್ಟು 'ಹುಶ್ ಹುಶ್' ಸಂಗತಿಯಾಗಿದ್ದು ಆ ಮೂರು ದಿನ ಅವರಿಗೇನಾಗುತ್ತದೆ, ದಿನಗಳನ್ನು ಹೇಗೆ ನಿಭಾಯಿಸುತ್ತಾರೆ, ಅವರ ಸಮಸ್ಯೆಗಳೇನು ಎಂಬ ಬಗೆಗೆ ಯಾರೂ ಯೋಚಿಸುವುದಿಲ್ಲ. ಗಂಡಸರ ಎದುರಿಗೆ ಮುಟ್ಟು ಎಂದು ಮಾತೆತ್ತುವುದೇ ನಾಚಿಕೆಗೇಡು ಎಂಬ ಭಾವನೆಯಿದೆ. ಈಗಲೂ ಅಪ್ಪ, ಅಣ್ಣ, ತಮ್ಮಂದಿರಂತಹ ಹತ್ತಿರದ ಪುರುಷ ಸಂಬಂಧಿಗಳ ಬಳಿ ನ್ಯಾಪ್ಕಿನ್ ತರಿಸಿಕೊಳ್ಳಲು, ಹೊಟ್ಟೆನೋವೆಂದು ಹೇಳಿಕೊಳ್ಳಲು ಅಪಾರ ಹಿಂಜರಿಕೆಯಿದೆ. ಮುಟ್ಟು ತೀರಾ ಖಾಸಗಿ ವಿಷಯವಾಗಿ ಶಾಲೆಯಲ್ಲಿ ಶಿಕ್ಷಕಿಯ ಬಳಿ ನ್ಯಾಪ್ಕಿನ್ ಕೇಳಿ ಪಡೆಯಲೂ ಹುಡುಗಿಯರು ನಾಚಿ ಮುದ್ದೆಯಾಗುತ್ತಿದ್ದಾರೆ.

ಎಂದೇ ಧಾರ್ಮಿಕ ಕಾರಣಗಳಿಗಲ್ಲದಿದ್ದರೂ ಈಗಲೂ 'ಆ ಮೂರು ದಿನ' ತಮ್ಮ ಚಟುವಟಿಕೆಗೆ ತೊಡಕಾಗಬಾರದೆಂದು ಮುಟ್ಟನ್ನು ಮುಂದೆ–ಹಿಂದೆ ಹಾಕಬಯಸುವುದು ಸಾಮಾನ್ಯವಾಗಿದೆ. ಸ್ರಾವದ ವೇಳೆ ತೀವ್ರ ಹೊಟ್ಟೆನೋವು, ವಾಂತಿ, ತಲೆನೋವು ಮತ್ತಿತರ ತೊಂದರೆಗಳಾಗುವ ಕೆಲ ಹೆಣ್ಣುಮಕ್ಕಳು ಪರೀಕ್ಷೆಯಂತಹ ನಿರ್ಧಾರಕ ಸಂದರ್ಭಗಳಲ್ಲಿ ತೊಂದರೆಯಾಗದಿರಲೆಂದು ಹಾರ್ಮೋನು ಮಾತ್ರೆ ನುಂಗಿ ಮುಟ್ಟು ಮುಂದೆ ಹಾಕುವುದೇನೋ ಸರಿ. ಆದರೆ ಸ್ನೇಹಬಳಗದಲ್ಲಿ ಒಂದು ಪಾರ್ಟಿ, ಎಲ್ಲಿಗೋ ಪ್ರವಾಸ, ಒಂದು ಪರೀಕ್ಷೆ, ಸಂದರ್ಶನ ಮುಂತಾಗಿ ತುರ್ತು ಅಲ್ಲದ ಕಾರಣಗಳಿಗೂ ಮುಟ್ಟು ಮುಂದಾಗಿಸುವ ಮಾತ್ರೆ ನುಂಗುವುದು ಸಾಮಾನ್ಯವಾಗಿದೆ.

ಮುಟ್ಟಾದವರು ಅಶುದ್ಧವೆಂದು ಧಾರ್ಮಿಕ ಕಾರಣಗಳಿಗಾಗಿ ಅದನ್ನು ಮುಂದೆ ಹಾಕುವುದು ಒಂದು ಅತಿಯಾದರೆ, ಆರಾಮವಾಗಿರಲು

